


ಸಾಲಿನಲ್ಲಿ ತಿಗಳರ ಚಿಕ್ಕನರಸಯ್ಯನವರ ಹೂವಿನ ತೋಟ ಇತ್ತು. ಇದನ್ನು ಹೊರತುಪಡಿಸಿದರೆ, ನಮ್ಮ ತೋಟದಿಂದ ಸ್ವಲ್ಪದೂರವಿದ್ದ ವೈಶ್ಯರ ಆದಿಮೂರ್ತಪ್ಪನವರ ಇನ್ನೊಂದು ಹೂವಿನ ತೋಟ ಇತ್ತು. ಆ ಹೂವಿನ ತೋಟವನ್ನೂ ಕೂಡ ತಿಗಳರೇ ನಿರ್ವಹಿಸುತ್ತಿದ್ದರು. ನಮಗೆ ಚಿಕ್ಕನರಸಯ್ಯನವರ ಹೂವಿನ ತೋಟವೇ ಹತ್ತಿರವಿದ್ದ ಕಾರಣ ಪ್ರತಿಶನಿವಾರ ಅಲ್ಲಿಗೆ ಮಾತ್ರ ಹೋಗುತ್ತಿದ್ದೆವು. ಚಿಕ್ಕನರಸಯ್ಯನವರ ಹೂವಿನ ತೋಟದಲ್ಲಿ ಹೂಗಳು ಸಿಗದೇ ಇದ್ದ ದಿನ ಮಾತ್ರ, ಆದಿಮೂರ್ತಪ್ಪನವರ ಹೂವಿನ ತೋಟಕ್ಕೆ ಹೋಗುತ್ತಿದ್ದೆವು. ಆದಿಮೂರ್ತಪ್ಪನವರ ಹೂವಿನ ತೋಟದಲ್ಲಿ ಸರ್ವ ಋತುಗಳಲ್ಲೂ ತುಂಬಿರುತ್ತಿದ್ದ ಒಂದು ದೊಡ್ಡ ಆಳವಾದ ಕಲ್ಯಾಣಿ ಇತ್ತು. ನೀರಿನ ಭಯಕ್ಕಾಗಿಯೇ ಮನೆಯವರು ಆದಿಮೂರ್ತಪ್ಪನವರ ಹೂವಿನ ತೋಟಕ್ಕೆ ಇನ್ನೂ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದ ನಮ್ಮನ್ನು ಹೆಚ್ಚಾಗಿ ಕಳುಹಿಸುತ್ತಿರಲಿಲ್ಲ.

ಪ್ರತಿ ಶನಿವಾರ ಒಂದು ಬೊಗಸೆ ಹೂವಿಗಾಗಿ ಬಿದಿರಿನಿಂದ ಮಾಡಿದ ಹೂಬುಟ್ಟಿಯನ್ನು ಕೈಯಲ್ಲಿ ಹಿಡಿದು, ನಾನೂ ಹಿರಿಯರ ಸಾಲಿನಲ್ಲಿ ಒಬ್ಬನಾಗಿ ನಿಂತಿರುತ್ತಿದ್ದೆ. ಇದಕ್ಕಾಗಿ ನಮ್ಮ ಸೊಪ್ಪಿನ ತೋಟದ ಪಕ್ಕವೇ ಇದ್ದ ತಿಗಳರ ಚಿಕ್ಕನರಸಯ್ಯನವರ ಹೂವಿನ ತೋಟಕ್ಕೆ ಬೆಳಕು ಹರಿಯುವ ಮೊದಲೇ ಹೋಗಬೇಕಾಗಿತ್ತು. ಹೂವಿನ ತೋಟಕ್ಕೆ ಹೋಗುವುದು ಒಂದು ಗಳಿಗೆ ತಡವಾದರೂ ಅಂದಿನ ಪೂಜೆಗೆ ನಮಗೆ ಹೂ ಸಿಗುತ್ತಿರಲಿಲ್ಲ. ಇದರಿಂದಾಗಿ ಮನೆಯವರಿಂದ ಬೈಸಿಕೊಳ್ಳಬೇಕಾಗಿತ್ತು! ಹೂವಿನ ತೋಟದಿಂದ ಹೂ ತರುವ ಕರ್ತವ್ಯವನ್ನು ಪಿಯು